ಕ್ರ.ಸಂ. 17

<u>ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರ ಶೂನ್ಯ ವೇಳೆಯ ಸೂಚನೆಗೆ ಉತ್ತರ</u>

**ಪ್ರಶ್ನೆ :** "ಸಮಾರಂಭ, ಮನರಂಜನೆ, ಜಾತ್ರೆ, ಮೆರವಣಿಗೆ ಮತ್ತು ಖಾಸಗಿ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಗಣ್ಯವ್ಯಕ್ತಿಗಳಿಗೆ ಹಾಗೂ ರಾಜಕಾರಣಿಗಳಿಗೆ ಅಭಿಮಾನಿಗಳು ಜೆ.ಸಿ.ಬಿ ಹಾಗೂ ಕ್ರೇನ್‌ಗಳನ್ನು ಅನಧಿಕೃತವಾಗಿ ಬಳಸಿ, ದಟ್ಟ ಜನಸಂದಣಿಯಲ್ಲಿ ಜೆ.ಸಿ.ಬಿ ಹಾಗೂ ಕ್ರೇನ್‌ಗಳ ಮೇಲೆ ನಿಂತುಕೊಂಡು, ಅಲ್ಲಿಂದ ಹೂವುಗಳನ್ನು ಚೆಲ್ಲುವುದು, ಸೇಬು, ಮೂಸಂಬಿ, ಕಿತ್ತಲೆ ಹಣ್ಣು, ಅನಾನಸ್, ಕಬ್ಬು, ಭತ್ತ, ಕಡಲೆಕಾಯಿ, ಕೊಬ್ಬರಿ, ಬೆಲ್ಲ, ಹೂವು, ಟೊಮೆಟೋ, ಕ್ಯಾಪ್ಸಿಕಾಮ್, ಕ್ಯಾರೆಟ್, ಬೀಟ್‌ರೂಟ್, ಸೀಮೆ ಬದನೆಕಾಯಿ ಹಾಗೂ ವಿಧ ವಿಧವಾದ ತರಕಾರಿ, ರೇಷ್ಮೆಗೂಡು ಇವುಗಳಿಂದ ತಯಾರಿಸಿದ ದೊಡ್ಡ ಗಾತ್ರದ ಹಾರ, ತುರಾಯಿಗಳನ್ನು ಹಾಕಲಾಗುತ್ತಿದೆ. ಇಂತಹ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಹೆಚ್ಚಿನ ಜನಸಂದಣಿ ಇರುವಡೆಯಲ್ಲಿ ಈ ವಾಹನಗಳ ಬಳಕೆಯನ್ನು ಮೋಟಾರು ವೆಹಿಕಲ್ ಆಕ್ಟ್ ಸೆಕ್ಷನ್-200 ಅಡಿ ನಿಷೇಧಿಸಲಾಗಿದೆ. ಈ ರೀತಿ ವಾಹನಗಳ ದುರ್ಬಳಕೆ ಕೆಲವು ವರ್ಷಗಳಿಂದ ರಾಜ್ಯದಲ್ಲಿ ನಿರಂತರವಾಗಿ ಸಾಗುತ್ತಿದ್ದು, ಅವಘಡಗಳು ಸಂಭವಿಸುತ್ತಿದ್ದರೂ ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಸರ್ಕಾರಗಳು ಮೂಕ ಪ್ರೇಕ್ಷಕರಂತೆ ವರ್ತಿಸುತ್ತಿರುವುದು ಅತ್ಯಂತ ದುರದೃಷ್ಟಕರ ಸಂಗತಿ.

ಮುಂದುವರೆದು, ನಗರ ಹಾಗೂ ಪಟ್ಟಣ ಪ್ರದೇಶಗಳ ಮುಖ್ಯ ರಸ್ತೆಗಳಲ್ಲಿ ಇದೇ ರೀತಿಯ ದೊಡ್ಡ ಗಾತ್ರದ ಫ್ಲೆಕ್ಸ್, ಬ್ಯಾನರು ಹಾಗೂ ಕಟೌಟ್‌ಗಳನ್ನು ಹಾಕುವುದರಿಂದ ಸಂಘರ್ಷಗಳು, ಅಪಘಾತಗಳು ಹಾಗೂ ಪರಿಸರ ಮಾಲಿನ್ಯದಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ.

ಮನರಂಜನೆ, ಪ್ರಚಾರ, ವೈಯಕ್ತಿಕ ಪ್ರತಿಷ್ಠೆ ಹಾಗೂ ಓಲೈಕೆಗಾಗಿ ರಾಜಕೀಯ ಸಮಾರಂಭಗಳಲ್ಲಿ, ದಟ್ಟ ಜನಸಂದಣಿಯಲ್ಲಿ ಹೆಚ್ಚಿನ ರೀತಿಯಲ್ಲಿ ಸದರಿ ವಾಹನಗಳನ್ನು ಬಳಸಲಾಗುತ್ತಿದೆ. ಇದರಿಂದಾಗಿ ಭಾರಿ ಪ್ರಮಾಣದ ಜೀವಹಾನಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ."

**ಉತ್ತರ:** ಸಮಾರಂಭ, ಮನರಂಜನೆ, ಜಾತ್ರೆ, ಮೆರವಣಿಗೆ ಮತ್ತು ಖಾಸಗಿ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಂಬಂಧಿಸಿದ ಸ್ಥಳೀಯ ಆಡಳಿತಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಫ್ಲೆಕ್ಸ್, ಬ್ಯಾನರ್ ಹಾಗೂ ಕಟೌಟ್‌ಗಳನ್ನು ಅನುಮತಿ ಪಡೆಯದೇ ಅಥವಾ ಮುಂಜಾಗ್ರತಾ ಕ್ರಮಕೈಗೊಳ್ಳದೇ ಅಳವಡಿಸಿದಲ್ಲಿ ಸಂಘರ್ಷಗಳು ಅಥವಾ ಅಪಘಾತಗಳು ಸಂಭವಿಸಿದಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು. ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ಸ್, ಬ್ಯಾನರ್ ಹಾಗೂ ಕಟೌಟ್‌ಗಳನ್ನು ಹಾಕುವುದು ಕಂಡುಬಂದಲ್ಲಿ ಕರ್ನಾಟಕ ಓಪನ್ ಪ್ಲೇಸಸ್ (ಪ್ರಿವೆನ್ಷನ್ ಆಫ್ ಡಿಸ್‌ಫಿಗರ್‌ಮೆಂಟ್) ಆಕ್ಟ್, 1981ರ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ರಾಜಕೀಯ ಸಮಾರಂಭಗಳಲ್ಲಿ ವಾಹನ ದಟ್ಟಣೆಯನ್ನು ನಿಯಂತ್ರಿಸಲು ಪ್ರತ್ಯೇಕವಾದ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸಿ ಅವಶ್ಯವೆನಿಸಿದಲ್ಲಿ ನಿಗಧಿತ ಅವಧಿಯಲ್ಲಿ ವಾಹನ ಮಾರ್ಗಗಳನ್ನು ಬದಲಾಯಿಸಿ ಯಾವುದೇ ರೀತಿಯ ಜೀವ ಹಾನಿಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

...2

ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 2(ಸಿಎಬಿ)ರ ಮೇರೆಗೆ, ಜೆ.ಸಿ.ಬಿ. ಹಾಗೂ ಕ್ರೇನ್‌ಗಳನ್ನು Construction Equipment Vehicle ಗಳಾಗಿ ವ್ಯಾಖ್ಯಾನಿಸಲಾಗಿದೆ. ಅದರಂತೆ, ಸದರಿ ವಾಹನವನ್ನು ಕಟ್ಟಡ ನಿರ್ಮಾಣ ಕಾಮಗಾರಿ, ರಸ್ತೆ ನಿರ್ಮಾಣ ಸೇರಿದಂತೆ ಇತರೆ ನಿರ್ದಿಷ್ಟ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕಾಗಿರುತ್ತದೆಯೇ ಹೊರತು ಜನ ಸಂದಣಿ ಕಾರ್ಯಕ್ರಮಗಳ ಸಂದರ್ಭದಲ್ಲಿ ಅಪಾಯಕರ ರೀತಿಯಲ್ಲಿ ಹಾರಗಳನ್ನು ಹಾಕಲು ಬಳಸುವಂತಿಲ್ಲ. ಒಂದು ವೇಳೆ ಸದರಿ ನಿಯಮ ಉಲ್ಲಂಘನೆ ಮಾಡಿದಲ್ಲಿ ಅಂತಹ ವಾಹನ ಮಾಲೀಕರ ವಿರುದ್ಧ ಮೋಟಾರು ವಾಹನಕಾಯ್ದೆ 1988ರ ಕಲಂ 184 ಮತ್ತು 190(2) ರಡಿ ಕ್ರಮಕೈಗೊಳ್ಳಲಾಗುತ್ತದೆ.

**ಹೆಚ್‌ಡಿ 82 ಎಸ್‌ಎಸ್‌ಟಿ 2023**

**(ಆರಗ ಜ್ಞಾನೇಂದ್ರ)**
ಗೃಹ ಸಚಿವರು.